ಶಿವಮೊಗ್ಗ ಡಿಸ್ಟ್ರಿಕ್ಟು.

ಇಸ್ತಿಹಾರ್.

ತಾರೀಖು 16ನೆ ಮಾರ್ಚಿ 1909.

ಮೈಸೂರು ಕೀಮೆಯ ಲೀಟ್ ಚೀಫ್ ಕಮಿಷ್ನರವರಿಂದ ಕೊಡಲ್ಪಟ್ಟ 17—4—1867ನೆ ಮಕ್ತುಂ 6ನೆ ನಂಬರು ಭೂಮಿಯಲ್ಲಿ ಹೂಳಿಲ್ಪಟ್ಟ ನಿಧಿಗಳ ಪತ್ತೆ ವಿಷಯಕವಾದ ಇಸ್ತಿಹಾರನ್ನು ಅನುಸರಿಸಿ ಇದರಿಂದ ಸಮಸ್ತ ಜನಗಳಿಗೂ ತಿಳಿಯುವ ಹಾಗೆ ಮಾಡಿಸುವದೇನಂದರೆ—

ಶಿವಮೊಗ್ಗ ಡಿಸ್ಟ್ರಿಕ್ಟು ಸಾಗರದ ತಾಲ್ಲೂಕು ಅನಂತಪುರದ ಗ್ರಾಮದಲ್ಲಿ ಬಸವಂಣಪ್ಪನೆಂಬುವನು ತನ್ನ ಸ್ವಂತ ಖಾತೆ ನಾಳು ನಿವೇಕನವನ್ನು ಮನೆ ಕಟ್ಟುವ ಉದ್ದಿಶ್ಯ ನೆಲಗಟ್ಟು ಮಾಡಿಸುತ್ತಿರುವಾಗ್ಯೆ ಈ ಕೆಳಗೆ ವಿವರಿಸಿರುವ ನಿಧಿಯು ಸಿಕ್ಕಿತು.

ಭಂಗಾರದ ವರಹಾ ನಾಣ್ಯಗಳು 94.

ಭಂಗಾರದ ಬಾಖಿತು ಅರ್ಧವರಹ ನಾಣ್ಯಗಳು 51.

ಮತ್ತು ನಾಣ್ಯದಲ್ಲಿ ಕತ್ತರಿಸಿದ 2 ತುಂಡು. ಇವುಗಳೆಲ್ಲಾ ಸೇರಿ ಒಟ್ಟು ನಾಣ್ಯಗಳ ತೂಕ 35 ರೂಪಾಯಿ 4 ಆಣೆ.

ಭಂಗಾರದ ವಂಕಿ ಜೊತೆ ಬಂದು (ಅದದು 2) ಹಳ್ಳೀ ಇಕ್ಕೇರಿ ಬಂಣ ತೂಕ 9 ರೂಪಾಯಿ 12 ಆಣೆ ಮತ್ತು 4 ಗುಲಗಂಜಿ.

(ಇದು ಸಿಕ್ಕಿದ ನಾಣ್ಯಗಳಿಂದ ತಯಾರಾಗಿರತಕ್ಕದ್ದು).

ಇವುಗಳೆಲ್ಲಾ ಭೂಮಿಯಲ್ಲಿ ಸಿಕ್ಕಿದ ನಾಣ್ಯಗಳಿಂದ ತಯಾರಾದ್ದು.

ಭಂಗಾರದ ಹಿಂಬಳೆ ಜೊತೆ ಬಂದು (ಅದದು 2) ಹಳ್ಳೀ ಇಕ್ಕೇರಿ ಬಂಣ ತೂಕ 5 ರೂಪಾಯಿ 12 ಆಣೆ 4 ಗುಂಜಿ ಕಡಮೆ.

ಭಂಗಾರದ ತಂತಿರೇಖು ಜೊರು ಮತ್ತು ಬಿಸಿಗೆ ಜೊರುಗಳು ಸಹ ತೂಕ 1 ರೂಪಾಯಿ 12 ಆಣೆ ಹಳ್ಳೀ ಇಕ್ಕೇರಿ ಬಂಣ.

ಭಂಗಾರದ ಗಟ್ಟಿ ಬಂದು ಜೊರುಗಳು ಸಹ ಸೇರಿ 3 ರೂಪಾಯಿಗೆ 2 ಆಣೆ ಮತ್ತು 5 ಗುಲಗಂಜಿ ತೂಕ ಕಡಮೆ ಇದೆ. ಹಳ್ಳೀ ಇಕ್ಕೇರಿ ಬಂಣ.

ಭಂಗಾರದ ಸುತ್ತುಂಗರ ಒಂದು 1 ವರಹಾ ತೂಕವಿರುತ್ತೆ ಬಂಣ ಇಕ್ಕೇರಿ ವರಹ.

ನಗದು 30 ರೂಪಾಯಿಗಳು ಈ ರೂಪಾಯಿಗಳು ಸಿಕ್ಕಿದ ನಾಣ್ಯಗಳ ಮಾರಾಟದಿಂದ ಉತ್ಪತ್ತಿ ಆದ್ದು.

2. ಸದರಿ ವಿಶಿಷ್ಟ ನಿಧಿಯೇ ಆಗಲಿ ಅಥವಾ ಅದರ ಭಾಗಕ್ಕಾಗಲಿ ಹಕ್ಕುದಾರರೆಲ್ಲರೂ ಈ ಇಸ್ತಿಹಾರ್ ಮೈಸೂರು ಗೆಜೆಟ್ಟಿನಲ್ಲಿ ಛಾಯಿಪಾದ ತಾರೀಖು ಲಾಗಾಯಿತು 6 ತಿಂಗಳೊಳಗೆ ತಮ್ಮ ಹಕ್ಕು ಇರತಕ್ಕಬಗ್ಯೆ ಧರಖಾಸ್ತು ಕೊಟ್ಟು ಅವರಿಗೆ ಇರತಕ್ಕ ಹಕ್ಕನ್ನು ಸ್ಥಾಪಿಸಿಕೊಳ್ಳತಕ್ಕ ಬಗ್ಯೆ ಖುದ್ದಾಗಿಯಾಗಲಿ ವಿಜಂಟರ ಮೂಲಕವಾಗಲಿ ಶಿವಮೊಗ್ಗ ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷ್ನರವರ ಆಫೀಸಿನಲ್ಲಿ 1909ನೆ ಇಸವಿ ಅಕ್ಟೋಬರು 2ನೆ ತಾರೀಖು ದಿವಿ 11 ಘಂಟೆಗೆ ಸರಿಯಾಗಿ ಹಾಜರಾಗಬೇಕು.

ಆರ್. ಟಿ. ಮಹದೇವರಾವ್,
ಫಾರ್ ಡೆಪ್ಯುಟಿ ಕಮಿಷನರ್.

ನೋಟಸ್.

ಚನ್ನಪಟ್ಟಣ ತಾಲ್ಲೂಕು ಕಛೇರಿಯಿಂದ.

ತಾರೀಖು 16–18ನೆ ಮಾರ್ಚಿ 1909.

ಇದರಿಂದ ಸರ್ವಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ತಾಲ್ಲೂಕು ಮಜಕೂರು ರಿಕಾರ್ಡಿನ ವಿಲೆಯಲ್ಲಿ ಇರುವ ಮೌಜೆವಾರ್ ಡಿಟ್ಟಂಬೆಟ್ಟು–ಕುಳವಾರು ಬೆಟ್ಟು ಯಾನೆ ಅವ್ವಲ್ ನಂಬರು ದುಯ್ಯಂ ನಂಬರು ವಗೈರೆ ಹಳೆ ಲೆಕ್ಕಗಳನ್ನು ಗವರ್ನಮೆಂಟು 11—3—95ನೆ ಮಕ್ರುಂ 14523-30—R. F. 157-93ನೆ ನಂಬರು ಪ್ರೊಸಿಡಿಂಗ್ಸಿನಲ್ಲಿ ನಮೂದಿರುವ ಮೇರೆಗೆ ಸರ್ವೆ ಆದ 12 ವರುಷಗಳ ಕಾಲ ಕಳದು ಇರುವದ್ದರಿಂದ ನಾಶಪಡಿಸುವದಕ್ಕಾಗಿ ಸಾರ್ಟ್ ಮಾಡಿಸಿಟ್ಟಿರುತ್ತೆ. ಇವುಗಳಿಗೆ ಸಮ್ಮಂಧಪಟ್ಟ ದಾಖಲೆಗಳು ಅವಶ್ಯಕ ಇರತಕ್ಕವರು ಯಾರಿದ್ದರು ಈ ಇಸ್ತಿಹಾರ್ ಛಾಯಿಪ್ ತಾರೀಖು ಲಾಗಾಯಿತು (ಮೂರು) ತಿಂಗಳ ಒಳಗಾಗಿ ತಾಲ್ಲೂಕಿಗೆ ಕ್ರಮವಾಗಿ ಅಪ್ಲಿಕೇಷ್ನ ಕೊಟ್ಟು ಕಾಪಿ ಪಡದುಕೊಳ್ಳಬಹುದು. ಈ ವಾಯಿದೆ ಕಳದ ಕೂಡ್ಲೆ ಸದರಿ ರಿಕಾರ್ಡುಗಳೆಲ್ಲವು ನಾಶಪಡಿಸುವದ್ದರಿಂದ ನಂತರ ದಾಖಲೆ ದೊರಿಯಲಾರದು ತಿಳಿಯುವದು.

ಹೆಚ್. ವೆಂಕಟನರಸಯ್ಯ,
ಆಕ್ಟಿಂಗ್ ಅಮಲ್ದಾರ್.

ಬೆಂಗಳೂರು ಸಬ್ ಜಡ್ಜಿಯವರ ಕೋರ್ಟಿನಲ್ಲಿ.

ಸನ್ 1908—09ನೆ ಇಸವಿ ಮಿ|| ಅರ್ಜೀ ನಂಬರ್ 741.

ತುಮಕೂರಿನಲ್ಲಿ ಡಿಸ್ಟ್ರಿಕ್ಟು ಶಿರಸ್ತೆದಾರ್ರಾಗಿದ್ದು ಛವತಿಪಟ್ಟು ಎಸ್. ಅನಂತರಾಮೈಯ್ಯಂಗಾರ್ರ್.

ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಬೆಂಗಳೂರು ಬಳೇಪೇಟೇಲಿರುವ ಅನಂತರಾಮೈಯ್ಯಂಗಾರ್ರ ಮಗಳು ಅಮ್ಮಾಯಮ್ಮ, ಸದರೀ ವ್ಯತಪಟ್ಟು

ಎಸ್. ಅನಂತರಾಮೈಯ್ಯಂಗಾರ್ರಿಗೆ ಖಾಸಾ ಮಗಳು ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರಲ್ಲಿ ವಾಸಸ್ಥರಾಗಿ ಮೃತಪಟ್ಟ ಅನಂತರಾಮೈಯ್ಯಂಗಾರ್ರ ಜಿಂದಗಿ ಬಗ್ಯಾಗಿ ಬರತಕ್ಕ 4,043—0—7 ರೂಪಾಯಿಗಳನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನ ರಗ್ಯುಲೇಷ್ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಅವ್ಮೈಯ್ಯನ್ಮನ ಅರ್ಜಿಯನ್ನು ಸ್ ೧೯೦೯ನೆ ಇಸವಿ ಮಾರ್ಚಿ 26ನೆ ತಾರೀಖಿನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿವರ್ಕೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಅನಂತರಾಮೈಯ್ಯಂಗಾರ್ರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಯರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ ೧೯೦೯ನೆ ಇಸವಿ ಮಾರ್ಚಿ 11ನೆ ತಾರೀಖಿನಲ್ಲಿ ಕೋರ್ಟು ಮೊಹರಿನಿಂ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

1908—09ನೆ ಇಸವಿ ಮಿ|| ಅರ್ಜೀ ನಂಬರ್ 750.

ವೆಲ್ಲೂರಿನಲ್ಲಿದ್ದು ಫವತಿಪಟ್ಟ ವಿ. ಪಿ. ಕೃಷ್ಣಸ್ವಾಮಿ ನಾಯಿಡುಯವರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಬೆಂಗಳೂರು ಸಿವಿಲ್ ಅಂಡ್ ಮಿಲಿಟರಿ ಸ್ಪೇಷ್ Sent Merchants 133ನೆ ನಂಬರು ಸಪಿಂಗ್ಸ್ ರೋಡಿನಲ್ಲಿರುವ ವಿ. ಪಿ. ಲಕ್ಷ್ಮಣಸ್ವಾಮಿ ನಾಯಿಡು, ಮೃತಪಟ್ಟ ಸದರೀ ವಿ. ಪಿ. ಕೃಷ್ಣಸ್ವಾಮಿ ನಾಯಿಡುಯವರಿಗೆ ಮುಖ್ಯ ವಾರಸುದಾರ್ರು ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ವಾಸಸ್ಥರಾಗಿ ಮೃತಪಟ್ಟ ಕೃಷ್ಣಸ್ವಾಮಿ ನಾಯಿಡುಯವರ ಜಿಂದಗಿ ಬಗ್ಯಾಗಿ ಬರತಕ್ಕ 1,000 ರೂಪಾಯಿಗಳನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರಗ್ಯುಲೇಷ್ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರಿ ದರಖಾಸ್ತುದಾರರಾದ ಲಕ್ಷ್ಮಣಸ್ವಾಮಿ ನಾಯಿಡುಯವರ ಅರ್ಜಿಯನ್ನು ಸ್ ೧೯೦೯ನೆ ಇಸವಿ ಮಾರ್ಚಿ 26ನೆ ತಾರೀಖಿನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿವರ್ಕೆ ಮಾಡಲ್ಪಡತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಕೃಷ್ಣಸ್ವಾಮಿ ನಾಯಿಡುಯವರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ ೧೯೦೯ನೆ ಇಸವಿ ಮಾರ್ಚಿ 10ನೆ ತಾರೀಖಿನಲ್ಲಿ ಕೋರ್ಟು ಮೊಹರಿನಿಂ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸ್ ೧೯೦೮—09ನೆ ಇಸವಿ ಮಿ|| ಅರ್ಜಿ ನಂಬರ್ 757.

ಅರ್ಜಿದಾರರು ಸಿವಿಲ್ ಅಂಡ್ ಮಿಲಿಟರಿ ಸ್ಪೇಷ್ ಸಪಿಂಗ್ಸ್ ರೋಡ್ 133ನೆ ನಂಬರ್ ಮನೇಲಿರುವ ವಿ. ಪಿ. ಲಕ್ಷ್ಮಣಸ್ವಾಮಿನಾಯಿಡು, ಮೈನರಾದ 1ನೆ ಗೋವಿಂದರಾಜಲು, 2ನೆ ಲಕ್ಷ್ಮಿದೇವಮ್ಮಾಳ್, 3ನೆ ಕಾನ್ನಮ್ಮಾಳ್, ಕೃಷ್ಣಸ್ವಾಮಿ ನಾಯಿಡುಯವರ ಆಸ್ತೀ ವಿಷಯದಲ್ಲಿ—

ಸದರೀ ಮೈನರಾದ ಗೋವಿಂದರಾಜಲು ವಗ್ಯೆರೇರಿಗೆ ಖಾಸಾ ತಂದೆ ಆಗಬೇಕೆಂಬ ಹಕ್ಕಿನಮೇಲೆ ಬೆಂಗಳೂರು ಸ್ಥಳದ ಸದರೀ ಮೈನರಿನ ಆಸ್ತಿ ಕಾಪಾಡುವದಕ್ಕೆ ಸರ್ಟಿಫಿಕೇಟ್ ಬಗ್ಯೆ ಅರ್ಜಿ ಕೊಟ್ಟು ಇರುತ್ತಾರೆ. ಸದರೀ ಅರ್ಜಿ ಹಿಯರಿಂಗ್ ಬಗ್ಯೆ ಸ್ ೧೯೦೯ನೆ ಇಸವಿ ಮಾರ್ಚಿ ತಾರೀಖು 26ರಲ್ಲು ಮೊಕರರು ಮಾಡಿ ಇರುವದಾಗಿ ಇದರಿಂದ ನೋಟಿಸ್ ಕೊಡೋಣಾಗಿದೆ.

ಸ್ ೧೯೦೯ನೆ ಇಸವಿ ಮಾರ್ಚಿ ತಿಂಗಳು 10ನೆ ತಾರೀಖಿನಲ್ಲಿ ಕೋರ್ಟು ಮೊಹರ್ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸ್ ೧೯೦೮—09ನೆ ಇಸವಿ ಮಿ|| ಅರ್ಜೀ ನಂಬರ್ 775.

ಚನ್ನಪಟ್ಟಣದಲ್ಲಿದ್ದು ಫವತಿಪಟ್ಟ ಸಬಿನಾಬಿ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಚನ್ನಪಟ್ಟಣದ ಕಸಬಾ ಕುಂಬಾರ್ರ ಬೀದಿಲಿರುವ ಸೈಯದ್ ಹುಸೇನ್ ಸಾಬಿ ಮಗ ಸೈಯದ್ ಹೈದರ್‌ಸಾಬಿ, ಮೃತಪಟ್ಟ ಸದರೀ ಸಬಿನಾಬಿಗೆ ಖಾಸಾ ತಂದೆ ಆಗಬೇಕೆಂಬ ಹಕ್ಕುದಾರಿಮೇಲೆ ಚನ್ನಪಟ್ಟದಲ್ಲಿ ವಾಸಸ್ಥರಾಗಿ ಮೃತಪಟ್ಟ ಸಬಿನಾಬಿ ಜಿಂದಗಿ ಬಗ್ಯಾಗಿ ಬರತಕ್ಕ 443 ರೂಪಾಯಿಗಳ ಸಾಲವನ್ನು ವಸೂಲ್‌ಮಾಡುವದಕ್ಕೆ 1901ನೆ ಇಸವಿ 7ನೆ ರಗ್ಯುಲೇಷ್ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡುತ್ತಾರೆ.

ಸದರೀ ದರಖಾಸ್ತುದಾರರಾದ ಸೈಯದ್ ಹೈದರ್‌ಸಾಬಿ ಅರ್ಜಿಯನ್ನು ಸ್ ೧೯೦೯ನೆ ಇಸವಿ ಏಪ್ರೆಲ್ 2ನೆ ತಾರೀಖಿನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿವರ್ಕೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸಬಿನಾಬಿ ಆಸ್ತಿಗೆ ಹಕ್ಕುದಾರರಾದ ವಿಶಿಷ್ಯರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ ೧೯೦೯ನೆ ಇಸವಿ ಮಾರ್ಚಿ 11ನೆ ತಾರೀಖಿನಲ್ಲಿ ಕೋರ್ಟು ಮೊಹರಿನಿಂ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸ್ ೧೯೦೮—09ನೆ ಇಸವಿ ಮಿ|| ಅರ್ಜೀ ನಂಬರು 779.

ಬೆಂಗಳೂರು ಕಂಟ್ರೋಲರ್ಸ್ ಆಫೀಸಿನಲ್ಲಿ ಜೂನಿಯರ್ ಅಕೌಂಟೆಂಟ್ ಆಗಿದ್ದು ಫವತಿಪಟ್ಟ ಕೃಷ್ಣರಾವ್ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಬೆಂಗಳೂರು ಬಳೇಪೇಟೆ ಡೋರ್ 95ನೆ ನಂಬರು ಮನೆಯಲ್ಲಿರುವ ಕೃಷ್ಣರಾವ್ ಹೆಂಡತಿ ಅವ್ಮೈಯ್ಯನ್ಮ ಮೈನರ್ ಗಾರ್ಡಿಯ್ ಬಿ. ಶಾಮರಾವ್, ಮೃತಪಟ್ಟ ಸದರೀ ಕೃಷ್ಣರಾಯರಿಗೆ ಮುಖ್ಯ ವಾರಸ್ದಾರ್ರು ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ವಾಸಸ್ಥರಾಗಿ ಮೃತಪಟ್ಟ ಕೃಷ್ಣರಾಯರ ಜಿಂದಗಿ ಬಗ್ಯಾಗಿ ಬರತಕ್ಕ 739 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರಗ್ಯುಲೇಷ್ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡುತ್ತಾರೆ.

ಸದರೀ ದರಖಾಸ್ತುದಾರರಾದ ಅವ್ಮೈಯ್ಯನ್ಮ ಮೈನರ್, ಗಾರ್ಡಿಯ್ ಬಿ. ಶಾಮರಾವ್ ಅರ್ಜಿಯನ್ನು ಸ್ ೧೯೦೯ನೆ ಇಸವಿ ಮಾರ್ಚಿ 26ನೆ ತಾರೀಖಿನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿವರ್ಕೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಕೃಷ್ಣರಾಯರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ ೧೯೦೯ನೆ ಇಸವಿ ಮಾರ್ಚಿ 10ನೆ ತಾರೀಖಿನಲ್ಲಿ ಕೋರ್ಟು ಮೊಹರಿನಿಂ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಟಿ. ಇ. ಜಯರಾಮ್ಮಯ್ಯರ್,
ಸಬ್ ಜಡ್ಜ್.